**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\3105\2017\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:29/05/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಗದಗ ಜಿಲ್ಲೆ ಶಿರಹಟ್ಟಿ ಪುರಸಭೆಯ ಮುಖ್ಯಾಧಿಕಾರಿಯಾಗಿದ್ದ 1) ಶ್ರೀ.ಹನುಮಂತಪ್ಪ ವೈ ಮಣ್ಣವಡ್ಡರ [ಪ್ರಸ್ತುತ ಬಾಗಲಕೋಟೆ ಜಿಲ್ಲೆ ತೇರದಾಳ ಪುರಸಭೆ] ಮತ್ತು 2) ಹಿಂದಿನ ಅಧ್ಯಕ್ಷರಾಗಿದ್ದ ಶ್ರೀ.ಬುಡಾನ್ ಷಾ ಮಕಾಂದಾರ್ ರವರ ದುರ್ನಡತೆಯ ಬಗ್ಗೆ.

**********

ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕ್ ವೆಂಕಟೇಶ್ವರ ರಸ್ತೆ ಪದ್ಮಕುಸುಮ ನಿವಾಸಿಯಾದ ಶ್ರೀ.ಜಯತೀರ್ಥ ಆರ್ ಕುಲಕರ್ಣಿ, ಶಿರಹಟ್ಟಿ ಪುರಸಭೆಯ ಸದಸ್ಯ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಗದಗ ಜಿಲ್ಲೆ ಶಿರಹಟ್ಟಿ ಪುರಸಭೆಯ ಮುಖ್ಯಾಧಿಕಾರಿಯಾಗಿದ್ದ ಶ್ರೀ.ಹನುಮಂತಪ್ಪ ವೈ ಮಣ್ಣವಡ್ಡರ [ಪ್ರಸ್ತುತ ಬಾಗಲಕೋಟೆ ಜಿಲ್ಲೆ ತೇರದಾಳ ಪುರಸಭೆ] (ಇನ್ನು ಮುಂದೆ, '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ಎದುರುದಾರರು ಗದಗ ಜಿಲ್ಲೆ ಶಿರಹಟ್ಟಿ ಪುರಸಭೆಯ ಹಿಂದಿನ ಮುಖ್ಯಾಧಿಕಾರಿಯಾಗಿದ್ದು, ಅವರ ಅಧಿಕಾರಾವಧಿಯಲ್ಲಿ ನೌಕರರಲ್ಲದ ಶ್ರೀ.ಮಜರೆಪ್ಪ ಗಾಳೆಪ್ಪ ಕಂಟೆಮ್ಮನವರ ರವರ ನಿಧನ ನಂತರ ಅವರ ಹೆಸರಿನಲ್ಲಿ ಪುರಸಭೆಯ ಖಾತೆಯಿಂದ ₹37,200/– ವೇತನವನ್ನು ಬಟಾವಾಡೆ ಮಾಡಿದ್ದು, ಶ್ರೀಮತಿ.ಜಯಶ್ರೀ ಸಜ್ಜನ್ ರವರು ನೌಕರರಾಗದೇ ಇದ್ದರೂ ಸಹ ಸದರಿಯವರ ಹೆಸರಿನಲ್ಲಿ ₹27,000/– ವೇತನ ತೆಗೆದಿದ್ದಾರೆ. ಎದುರುದಾರರು ಟೆಂಪೋ ಟಿಪ್ಪರ್ ಚಾಲಕರ ಅನಧಿಕೃತ ನೇಮಕಾತಿ, ಆದೇಶವಿಲ್ಲದೇ ಆಸ್ತಿಗಳ ನಂಬರೀಕರಣಕ್ಕಾಗಿ ಟೆಂಡರ್ ಕರೆದಿದ್ದಲ್ಲದೆ, ಅನಧಿಕೃತ ವಿಷಯವನ್ನು ತುರ್ತು ಸಭೆ ಕರೆದು ಮಂಡಿಸಿದ್ದಾರೆ. ಅವರ ಎರಡು ತಿಂಗಳ ಅಲ್ಪಾವಧಿಯಲ್ಲಿ ಅನಾವಶ್ಯಕವಾಗಿ ಸಾಮಗ್ರಿಗಳನ್ನು ಖರೀದಿ ಮಾಡಿ, ಸಾಮಾನ್ಯ ನಿಧಿಯ ಹಣವನ್ನು ಅನಾವಶ್ಯಕವಾಗಿ ಖರ್ಚು ಮಾಡಿರುವುದಾಗಿ ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

4. ದೂರಿನ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಗದಗ ರವರಿಗೆ ಕೇಳಲಾಗಿ, ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಗದಗ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

1) ಶಿರಹಟ್ಟಿ ಪಟ್ಟಣ ಪಂಚಾಯತ್‌ನಲ್ಲಿ ಖಾಸಗಿ ಪೌರಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಲೇಟ್.ಮಜ್ಜೂರಪ್ಪ ಗಾಳೆಪ್ಪ ಕಂಠೆಮ್ಮನವರ ರವರ ಬಾಬ್ತು 08 ತಿಂಗಳ (ಅಕ್ಟೋಬರ್, 2016 ರಿಂದ ಡಿಸೆಂಬರ್, 2016 ಮತ್ತು ಜನವರಿ, 2017 ರಿಂದ ಮೇ, 2017) ಬಾಕಿ ವೇತನ ₹37,200/–ನ್ನು ಸದರಿಯವರ ಅಪ್ರಾಪ್ತ ವಯಸ್ಸಿನ ಮಗಳಾದ ಕು||ನೀಲವ್ವ ರವರಿಗೆ ದಿನಾಂಕ:19/07/17ರಂದು ಚೆಕ್ ನಂ.078037ರಲ್ಲಿ ಎದುರುದಾರರು ನೀಡಿರುವುದು ದಾಖಲಾತಿಗಳಿಂದ ದೃಢಪಟ್ಟಿದೆ;
2) ಶಿರಹಟ್ಟಿ ಪಟ್ಟಣ ಪಂಚಾಯತ್‌ನಲ್ಲಿ ಪಂಪ್ ಆಪರೇಟರ್ ಆಗಿ ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಲೇಟ್.ಜಗದೀಶ್ ಸಜ್ಜನರ ರವರು ಮರಣ ಹೊಂದಿದ ಸುಮಾರು 02 ವರ್ಷಗಳ ನಂತರ ಲಿಖಿತ ಆದೇಶವಿಲ್ಲದೆ, ಅವರ ಪತ್ನಿ ಶ್ರೀಮತಿ.ಜಯಶ್ರೀ ರವರನ್ನು ಪಟ್ಟಣ ಪಂಚಾಯತ್‌ನ ಆಗಿನ ಅಧ್ಯಕ್ಷರಾಗಿದ್ದ ಶ್ರೀ.ಬುಡಾನ್ ಶಾ ಮಖಾನ್‌ದಾರ್ ರವರು ಕಛೇರಿಗೆ ಕರೆತಂದಿದ್ದು, ಸದರಿಯವರ ಹೆಸರಿನಲ್ಲಿ ದಿನಾಂಕ:01/12/16 ರಿಂದ 31/05/17ರ ಹಾಜರಾತಿ ವಹಿಯನ್ನು ಸೃಷ್ಟಿಸಿ, ಸದರಿ ಹಾಜರಾತಿ ವಹಿಯ ಪುಟಗಳಿಗೆ ಎದುರುದಾರರು ತಮ್ಮದಲ್ಲದ ಅವಧಿಯಾಗಿದ್ದರೂ, ಮೇಲ್ವಿಚಾರಣಾ ಅಧಿಕಾರಿಗಳಾಗಿ ಸಹಿ ಮಾಡಿ, ಸದರಿ ಹಾಜರಾತಿ ವಹಿಯನ್ನು ಆಧಾರವಾಗಿರಿಸಿ ಶ್ರೀಮತಿ.ಜಯಶ್ರೀ ರವರಿಗೆ 06 ತಿಂಗಳ ವೇತನ ₹27,000/– ವನ್ನು ಅನಧಿಕೃತವಾಗಿ ನೀಡಿದೆ;
3) ಎದುರುದಾರರು ಶಿರಹಟ್ಟಿ ಪಟ್ಟಣ ಪಂಚಾಯತ್‌ನಲ್ಲಿ ತಮ್ಮ ಕರ್ತವ್ಯದ ಅವಧಿಯಲ್ಲಿ ಅಂದರೆ, ದಿನಾಂಕ:22/05/17 ರಿಂದ 31/07/17ರ ಅವಧಿಯಲ್ಲಿ ಪುರಸಭೆಯ ಜನರಲ್ ಫಂಡ್‌ನಿಂದ ₹18,13,855/–ಗಳನ್ನು ವ್ಯಯಿಸಿದ್ದು, ಪಟ್ಟಣ ಪಂಚಾಯತ್ ವ್ಯಾಪ್ತಿಯ ವಾರ್ಡ್ ನಂ.10ರಲ್ಲಿರುವ ಕಲ್ಮಠ ಬಾವಿಯನ್ನು ಸ್ವಚ್ಛಗೊಳಿಸಲು ₹54,627/–ಗಳನ್ನು ಯಾವುದೇ ಠರಾವು ಇಲ್ಲದೆ ಮೇಲಾಧಿಕಾರಿಗಳ ಅನುಮತಿ ಪಡೆಯದೇ, ಕೇವಲ ಕಛೇರಿ ಟಿಪ್ಪಣಿ ಆಧಾರದ ಮೇಲೆ ಶ್ರೀ.ಬಿ.ಎಫ್.ತುಳಿ ರವರಿಗೆ ಪಾವತಿಸಿದ್ದಾರೆ. ಆ ಬಿಲ್ಲಿಗೆ ಪಟ್ಟಣ ಪಂಚಾಯತ್‌ನ ಆಗಿನ ಅಧ್ಯಕ್ಷರಾಗಿದ್ದ ಶ್ರೀ.ಬುಡಾನ್ ಶಾ ಮಖಾನ್‌ದಾರ್ ರವರು ಒಪ್ಪಿಗೆ ಸೂಚಿಸಿ, ಸಹಿ ಮಾಡಿರುವುದು ಕಂಡು ಬಂದಿದೆ ಎಂದು ಹೇಳಿದ್ದಾರೆ.

5. ಶಿರಹಟ್ಟಿ ಪಟ್ಟಣ ಪಂಚಾಯತ್‌ನ ಆಗಿನ ಅಧ್ಯಕ್ಷರಾಗಿದ್ದ ಶ್ರೀ.ಬುಡಾನ್ ಶಾ ಮಖಾನ್‌ದಾರ್ ರವರನ್ನು ದೂರಿನ ಮುಖಪುಟದಲ್ಲಿ 2ನೇ ಎದುರುದಾರರಾಗಿ ಸೇರಿಸಿ, ದೂರು ಮತ್ತು ತನಿಖಾ ವರದಿಗೆ 2ನೇ ಎದುರುದಾರರಿಂದ ಆಕ್ಷೇಪಣೆ ಹಾಗೂ ತನಿಖಾ ವರದಿಗೆ 1ನೇ ಎದುರುದಾರರಿಂದ ಉತ್ತರವನ್ನು ಕೇಳಲಾಯಿತು.

6. ಒಂದನೇ (1ನೇ) ಎದುರುದಾರರು ತಮ್ಮ ಉತ್ತರದಲ್ಲಿ –

ತಾವು ಶಿರಹಟ್ಟಿ ಪಟ್ಟಣ ಪಂಚಾಯತ್‌ನಲ್ಲಿ ಸೇವೆ ಸಲ್ಲಿಸುತ್ತಿರುವಾಗ ಶ್ರೀ.ಮಜರಪ್ಪ ಗಾಳಪ್ಪ ಕಂಟಮ್ಮನವರ ರವರು ಕಾರ್ಯಾಲಯದ ಸ್ವಚ್ಛತಾ ವಿಭಾಗದಲ್ಲಿ ಗುತ್ತಿಗೆ ಪೌರಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿದ್ದು, ಸದರಿಯವರು ದಿನಾಂಕ:06/07/17ರಂದು ಮೃತಪಟ್ಟ ಹಿನ್ನೆಲೆಯಲ್ಲಿ ಸದರಿಯವರ ಮಗಳು ಕಾರ್ಯಾಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯ ವೇತನವನ್ನು ಪಾವತಿಸಲು ದಿನಾಂಕ:13/07/17ರಂದು ಸಲ್ಲಿಸಿದ ಅರ್ಜಿಯಲ್ಲಿ ತಮ್ಮ ತಾಯಿಯು ಸಹ ದಿ:03/10/11ರಂದು ಮರಣ ಹೊಂದಿದ್ದಾರೆಂದು ತಿಳಿಸಿ, ದಾಖಲೆಗಳನ್ನು ಸಲ್ಲಿಸಿದನ್ವಯ ಸರ್ಕಾರದ ನಿಯಮಾವಳಿ ಪ್ರಕಾರ ಬಾಕಿ ವೇತನ ಪಾವತಿಸಿದೆ. ಮುಂದುವರೆದು, ತಮ್ಮ ಕಾರ್ಯಾಲಯದ ನೀರು ಸರಬರಾಜು ವಿಭಾಗದಲ್ಲಿ ಪಂಪ್ ಆಪರೇಟರಾಗಿ ದಿನಗೂಲಿ ಆಧಾರದಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ.ಜಗದೀಶ್ ಸಜ್ಜನ್ ರವರು ದಿ:07/08/14ರಂದು ಮೃತಪಟ್ಟಿದ್ದು, ಸದರಿಯವರ ಪತ್ನಿ ಶ್ರೀಮತಿ.ಜಯಶ್ರೀ ಸಜ್ಜನ್ ರವರು ತಮ್ಮನ್ನು ಅನುಕಂಪದ ಆಧಾರದ ಮೇಲೆ ತಾತ್ಕಾಲಿಕವಾಗಿ ಕೆಲಸಕ್ಕೆ ತೆಗೆದುಕೊಳ್ಳಲು ವಿನಂತಿಸಿ ಅರ್ಜಿಯನ್ನು ಸಲ್ಲಿಸಿದ್ದು, ಯೋಜನಾ ನಿರ್ದೇಶಕರ ನಿರ್ದೇಶನದನ್ವಯ ಸದರಿ ಶ್ರೀಮತಿ.ಜಯಶ್ರೀ ಸಜ್ಜನ್ ರವರನ್ನು ತಾತ್ಕಾಲಿಕವಾಗಿ ಅನುಕಂಪದ ಆಧಾರದ ಮೇಲೆ ಕೆಲಸ ನೀಡಿ, ಸದರಿಯವರು ಸೇವೆ ಸಲ್ಲಿಸಿದ ಅವಧಿಯ ಬಾಬ್ತು ₹27,000/–ಗಳನ್ನು ಸರ್ಕಾರದ ನಿಯಮಾವಳಿ ಪ್ರಕಾರ ಪಾವತಿಸಿದೆ. ತಮ್ಮ ಕಾರ್ಯಾವಧಿಯಲ್ಲಿ ಟೆಂಪೋ ಟಿಪ್ಪರ್‌ಗೆ ಯಾವುದೇ ಚಾಲಕರುಗಳನ್ನು ನೇಮಕ ಮಾಡಿಕೊಂಡಿಲ್ಲ. ವಾರ್ಡ್ ನಂ.10ರಲ್ಲಿರುವ ಬಾವಿಯನ್ನು ಸರ್ಕಾರದ ನಿಯಮಾವಳಿ ಪ್ರಕಾರ ಸ್ವಚ್ಛಗೊಳಿಸಿದೆಯೆಂದು ಹೇಳಿದ್ದಾರೆ.

7. ಎರಡನೇ (2ನೇ) ಎದುರುದಾರರು ತಮ್ಮ ಸೇವಾ ವಿವರದೊಂದಿಗೆ ಸಲ್ಲಿಸಿದ ಪತ್ರದಲ್ಲಿ ಸದರಿ ದೂರಿಗೆ ಸಂಬಂಧಪಟ್ಟ ಹಾಗೆ ವಿಚಾರಣೆ ನಡೆದಾಗ ಯಾವುದೇ ಸಂದರ್ಭದಲ್ಲಿ ತಾವು ವಿಚಾರಣೆಗೆ ಹಾಜರಾಗಲು ಸಿದ್ಧವಿರುವುದಾಗಿ ಹೇಳಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

**ಕುಮಾರಿ.ನೀಲಪ್ಪ ಕಂಟೆಮ್ಮನವರ ರವರಿಗೆ ₹37,200/–ಗಳನ್ನು ಪಾವತಿಸಿದ ಬಗ್ಗೆ –**

1) ಶಿರಹಟ್ಟಿ ಪಟ್ಟಣ ಪಂಚಾಯತ್‌ನಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಹೊಂದಿದ್ದಾರೆಂದು ಹೇಳಲಾದ ಶ್ರೀ.ಮಜರಪ್ಪ ಗಾಳಪ್ಪ ಕಂಟಮ್ಮನವರ ರವರು ದಿ:06/07/17ರಂದು ಮೃತಪಟ್ಟಿದ್ದಾರೆಂದು ಮರಣ ಪ್ರಮಾಣ ಪತ್ರದಲ್ಲಿ ಕಂಡು ಬಂದಿದೆ. ಸದರಿಯವರ ಬಾಬ್ತು ಬಾಕಿ ವೇತನ ಪಾವತಿಸುವಂತೆ ಅವರ ಮಗಳು ಕುಮಾರಿ.ನೀಲಮ್ಮ ರವರು ದಿ:13/07/17ರಂದು ಪಟ್ಟಣ ಪಂಚಾಯತ್

ಮುಖ್ಯಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ಶ್ರೀ.ಮಜರಪ್ಪ ಗಾಳಪ್ಪ ಕಂಟಿಮ್ಮನವರ ರವರ ಪತ್ನಿ ಶ್ರೀಮತಿ.ನಿಂಗವ್ವ ಕಂಟಿಮ್ಮನವರ ದಿ:03/10/11ರಂದೇ ಮೃತಪಟ್ಟಿದ್ದಾರೆಂದು ಸದರಿಯವರ ಮರಣ ಪ್ರಮಾಣ ಪತ್ರದಲ್ಲಿ ಕಂಡು ಬಂದಿದೆ. ಸದರಿ ಮೃತ ಶ್ರೀ.ಮಜರಪ್ಪ ಗಾಳಪ್ಪ ಕಂಟಿಮ್ಮನವರ ರವರ ಬಾಬ್ತು ಎಂಟು ತಿಂಗಳ (ಅಕ್ಟೋಬರ್ ನಿಂದ ಡಿಸೆಂಬರ್, 2016 ಮತ್ತು ಜನವರಿ, 2017 ರಿಂದ ಮೇ, 2017) ₹37,200/–ರ ಪಾವತಿಗಾಗಿ ಎದುರುದಾರರು ದಿ:19/07/17ರಂದು ಪಾವತಿ ವೋಚರ್‌ಗೆ ಸಹಿ ಮಾಡಿರುವುದು ಕಂಡು ಬಂದಿದೆ. ಸದರಿ ಮೊತ್ತವನ್ನು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಬಸವೇಶ್ವರ ವೃತ್ತದ ಚೆಕ್ ನಂ.078037 ದಿ:19/07/17ರಲ್ಲಿ ಮೃತರ ಮಗಳೆಂದು ಹೇಳಲಾದ ಕುಮಾರಿ.ನೀಲವ್ವ ಕಂಟಿಮ್ಮನವರ ರವರಿಗೆ ಪಾವತಿ ಮಾಡಲಾಗಿದೆಯೆಂದು ಹೇಳಲಾಗಿದ್ದು, ಸದರಿಯವರಿಗೆ ಸದರಿ ಹಣ ಸಂದಾಯವಾದ ಬಗ್ಗೆ ದಾಖಲೆಗಳಿಲ್ಲ. The Karnataka Municipalities Accounting and Budgeting Rules, 2006ರ ನಿಯಮ 44(3) ರನ್ವಯ "Account Payee" ಚೆಕ್ ಅನ್ನೇ ಸಂಬಂಧಪಟ್ಟವರಿಗೆ ನೀಡಬೇಕು ಮತ್ತು ನಿಯಮ 45ರನ್ವಯ ಸದರಿ ಪಾವತಿಗೆ ಸಂಬಂಧಿಸಿದಂತೆ, ಸ್ವೀಕೃತಿದಾರರಿಂದ ರಸೀದಿಯನ್ನು ಪಡೆದುಕೊಳ್ಳಬೇಕಿರುವುದು ಕಡ್ಡಾಯವಾಗಿದೆ. ಸದರಿ ದೂರಿನಲ್ಲಿ ಕುಮಾರಿ.ನೀಲವ್ವ ಕಂಟಿಮ್ಮನವರ ರವರಿಗೆ "Account Payee" ಚೆಕ್ ನೀಡಲಾಗಿದೆಯೆಂದು ಹೇಳಿದ ಬಗ್ಗೆ ದಾಖಲೆಗಳಿಲ್ಲ ಮತ್ತು ಸದರಿಯವರಿಗೆ ಹಣ ಸಂದಾಯವಾದ ಬಗ್ಗೆ ರಸೀದಿ ಲಭ್ಯವಿಲ್ಲ;

2) ಸದರಿಯವರಿಗೆ ಚೆಕ್ ಮುಖೇನ ಹಣ ಸಂದಾಯವಾಗಿದೆಯೆಂದು ಹೇಳುವ ಸಮಯಕ್ಕೆ ಸದರಿಯವರು ಅಲ್ಪವಯಸ್ಕರಾಗಿದ್ದರೆಂದು (ಜನನ ದಿ:02/04/2002) ಆಧಾರ್ ಕಾರ್ಡ್ ಮತ್ತು ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರದಲ್ಲಿ ಕಂಡು ಬಂದಿದೆ;

3) ಸದರಿ ಶ್ರೀ.ಮಜರಪ್ಪ ಗಾಳಪ್ಪ ಕಂಟಿಮ್ಮನವರ ರವರು ಮೂಲತಃ ಪಟ್ಟಣ ಪಂಚಾಯತ್ ನೌಕರರೇ ಅಲ್ಲ, ಅವರು ಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಕಾರ್ಮಿಕರನ್ನು ಪಟ್ಟಣ ಪಂಚಾಯತ್‌ಗೆ ಪೂರೈಸುವ ಗುತ್ತಿಗೆದಾರರಾಗಿದ್ದಾರೆಂದು ಶಿರಹಟ್ಟಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು ದಿ:19/11/18ರಂದು ತನಿಖಾಧಿಕಾರಿಯವರಿಗೆ ನೀಡಿದ ಸಮಜಾಯಿಷಿಯಲ್ಲಿ ಹೇಳಿದ್ದಾರೆ. ಶ್ರೀ.ಮಜರಪ್ಪ ಗಾಳಪ್ಪ ಕಂಟಿಮ್ಮನವರ ರವರು ಶಿರಹಟ್ಟಿ ಪಟ್ಟಣ ಪಂಚಾಯತ್‌ನಲ್ಲಿ ಗುತ್ತಿಗೆ ಆಧಾರದ ಮೇಲೆ ಪೌರ ಕಾರ್ಮಿಕರಾಗಿ ಸೇವೆಗೆ ನೇಮಕಗೊಂಡ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಆದರೆ, ಸದರಿಯವರು ಪುರಸಭೆಯ ನೌಕರರೆಂದು ಬಿಂಬಿಸುವ ಹಾಜರಾತಿ ವಹಿ (ಸೆಪ್ಟೆಂಬರ್ ನಿಂದ ಡಿಸೆಂಬರ್, 2016 ಮತ್ತು ಜನವರಿ, 2017 ರಿಂದ ಮೇ, 2017) ಕಡತದಲ್ಲಿ ಲಭ್ಯವಿದೆ. ಸದರಿಯವರ ಹೆಸರು ಹಾಜರಾತಿ ವಹಿ ಕ್ರಮ ಸಂಖ್ಯೆ.4ರಲ್ಲಿ ಕಂಡು ಬಂದಿದೆ. ಶ್ರೀ.ಮಜರಪ್ಪ ಗಾಳಪ್ಪ ಕಂಟಿಮ್ಮನವರ ರವರು ಶಿರಹಟ್ಟಿ ಪಟ್ಟಣ ಪಂಚಾಯತ್‌ನ ನೌಕರರೇ ಅಲ್ಲ ಎಂದು ಈಗಿನ ಮುಖ್ಯಾಧಿಕಾರಿಗಳು ತನಿಖಾಧಿಕಾರಿಯವರಿಗೆ ನೀಡಿದ ಸಮಜಾಯಿಷಿಯ ಹಿನ್ನೆಲೆಯಲ್ಲಿ ಮತ್ತು ಸದರಿಯವರು ಗುತ್ತಿಗೆ

BSM/3105/17



ಆಧಾರದ ಮೇಲೆ ಪೌರ ಕಾರ್ಮಿಕರಾಗಿ ಸೇವೆಗೆ ನೇಮಕಗೊಂಡ ಬಗ್ಗೆ ಯಾವುದೇ ದಾಖಲೆಗಳಿಲ್ಲದ ಕಾರಣ, ಮೇಲೆ ಹೇಳಿದ ₹37,200/-ರ ಪಾವತಿ ನಿಯಮಬಾಹಿರವಾಗಿದೆ;

**ಶ್ರೀಮತಿ.ಜಯಶ್ರಿ ಸಜ್ಜನ್ ರವರಿಗೆ ₹27,900/-ಗಳನ್ನು ಪಾವತಿಸಿದ ಬಗ್ಗೆ -**

4) ಶಿರಹಟ್ಟಿ ಪಟ್ಟಣ ಪಂಚಾಯತ್‌ನ ನೀರು ಸರಬರಾಜು ವಿಭಾಗದಲ್ಲಿ ದಿನಗೂಲಿ ಆಧಾರದಲ್ಲಿ ಸೇವೆ ಸಲ್ಲಿಸುತ್ತಿದ್ದರೆಂದು ಹೇಳಲಾದ ಶ್ರೀ.ಜಗದೀಶ್ ಸಜ್ಜನ್ ರವರು ದಿ:07/08/14ರಂದು ಮರಣ ಹೊಂದಿದ ಹಿನ್ನೆಲೆಯಲ್ಲಿ ಅನುಕಂಪದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕ ಹೊಂದಿದ್ದಾರೆಂದು ಹೇಳಲಾದ ಅವರ ಪತ್ನಿ ಶ್ರೀಮತಿ.ಜಯಶ್ರಿ ಕೋಂ ಜಗದೀಶ್ ಸಜ್ಜನ್ ದಿ:01/12/16 ರಿಂದ 31/05/17ರವರೆಗಿನ 6 ತಿಂಗಳ ವೇತನ ಬಾಬ್ತು ₹27,900/-ಗಳನ್ನು ದಿ:08/06/17ರಂದು 1ನೇ ಎದುರುದಾರರು ಪಾವತಿಸಲು ಆದೇಶಿಸಿದ್ದಾರೆ. ಸದರಿ ಶ್ರೀಮತಿ.ಜಯಶ್ರಿ ಸಜ್ಜನ್ ರವರು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ ಜಿಲ್ಲೆ ರವರಿಗೆ ದಿ:30/06/16ರಂದು ಸಲ್ಲಿಸಿದ ಅರ್ಜಿಯಲ್ಲಿ ತಮ್ಮನ್ನು ಶಿರಹಟ್ಟಿ ಪಟ್ಟಣ ಪಂಚಾಯತ್‌ಗೆ ಕೆಲಸಕ್ಕೆ ನೇಮಿಸಿಕೊಳ್ಳುವಂತೆ ವಿನಂತಿಸಿಕೊಂಡಿದ್ದು, ಸದರಿ ಅರ್ಜಿಯಲ್ಲಿ "Forward to TP for consideration under outsource" ಎಂಬ ಹಿಂಬರಹ ಮಾತ್ರ ಕಂಡು ಬಂದಿದ್ದು, 1ನೇ ಎದುರುದಾರರು ಹೇಳುವಂತೆ ಸದರಿ ಶ್ರೀಮತಿ.ಜಯಶ್ರಿ ಸಜ್ಜನ್ ರವರನ್ನು ಹೊರಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳಲು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ ಜಿಲ್ಲೆ ರವರು ನಿರ್ದೇಶನ ನೀಡಿದ ದಾಖಲೆಯಿಲ್ಲ;

5) ಮುಂದುವರೆದು, ಸದರಿ ಶ್ರೀಮತಿ.ಜಯಶ್ರಿ ಸಜ್ಜನ್ ರವರು ಪಟ್ಟಣ ಪಂಚಾಯತ್ ನೌಕರರೇ ಅಲ್ಲ, ಎಂದು ಶಿರಹಟ್ಟಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು ದಿ:19/11/18ರಂದು ತನಿಖಾಧಿಕಾರಿಯವರಿಗೆ ನೀಡಿದ ಸಮಜಾಯಿಷಿಯಲ್ಲಿ ಹೇಳಿದ್ದಾರೆ. ಸದರಿಯವರನ್ನು ಶಿರಹಟ್ಟಿ ಪಟ್ಟಣ ಪಂಚಾಯತ್‌ನಲ್ಲಿ ಅನುಕಂಪದ ಆಧಾರದ ಮೇಲೆ ತಾತ್ಕಾಲಿಕವಾಗಿ ಸೇವೆಗೆ ನೇಮಕಗೊಂಡ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಆದರೆ, ಸದರಿಯವರು ಪುರಸಭೆಯ ನೌಕರರೆಂದು ಬಿಂಬಿಸುವ ಹಾಜರಾತಿ ವಹಿ (ಸೆಪ್ಟೆಂಬರ್ ನಿಂದ ಡಿಸೆಂಬರ್, 2016 ಮತ್ತು ಜನವರಿ, 2017 ರಿಂದ ಮೇ, 2017) ಕಡತದಲ್ಲಿದೆ. ಸದರಿಯವರ ಹೆಸರು ಹಾಜರಾತಿ ವಹಿ ಕ್ರಮ ಸಂಖ್ಯೆ.23ರಲ್ಲಿ ಕಂಡು ಬಂದಿದೆ. ಶ್ರೀಮತಿ.ಜಯಶ್ರಿ ಸಜ್ಜನ್ ರವರು ಶಿರಹಟ್ಟಿ ಪಟ್ಟಣ ಪಂಚಾಯತ್‌ನ ನೌಕರರೇ ಅಲ್ಲ ಎಂದು ಈಗಿನ ಮುಖ್ಯಾಧಿಕಾರಿಗಳು ತನಿಖಾಧಿಕಾರಿಯವರಿಗೆ ನೀಡಿದ ಸಮಜಾಯಿಷಿಯ ಹಿನ್ನೆಲೆಯಲ್ಲಿ ಮತ್ತು ಸದರಿಯವರು ಗುತ್ತಿಗೆ ಆಧಾರದ ಮೇಲೆ ಪೌರ ಕಾರ್ಮಿಕರಾಗಿ ಸೇವೆಗೆ ನೇಮಕಗೊಂಡ ಬಗ್ಗೆ ಯಾವುದೇ ದಾಖಲೆಗಳಿಲ್ಲದ ಕಾರಣ, ಮೇಲೆ ಹೇಳಿದ ₹27,900/-ರ ಪಾವತಿ ನಿಯಮಬಾಹಿರವಾಗಿರುವುದು ಮಾತ್ರವಲ್ಲದೇ, ಸದರಿ ಪಾವತಿಯಲ್ಲಿ The Karnataka Municipalities Accounting and Budgeting Rules, 2006ರ ನಿಯಮ 44(3) ಮತ್ತು ನಿಯಮ 45ರ ಉಲ್ಲಂಘನೆಯಾಗಿದೆ;

**ವಾರ್ಡ್ ನಂ.10ರ ಕಲ್ಮಠ ಬಾವಿ ಸ್ವಚ್ಛಗೊಳಿಸುವ ಬಗ್ಗೆ ₹54,627/-ಗಳ ಪಾವತಿ -**

6) ಮೇ, 2017 ರಿಂದ ಜುಲೈ, 2017ರವರೆಗಿನ ಅವಧಿಯಲ್ಲಿ ಶಿರಹಟ್ಟಿ ಪಟ್ಟಣ ಪಂಚಾಯತ್‌ನ ಜನರಲ್ ಫಂಡ್‌ನಿಂದ ವ್ಯಯಿಸಿರುವ ಒಟ್ಟು ₹18,13,855/-ರ ಪೈಕಿ ವಾರ್ಡ್ ನಂ.10ರಲ್ಲಿರುವ ಕಲ್ಮಠ ಹತ್ತಿರವಿರುವ ಬಾವಿ ಸ್ವಚ್ಛಗೊಳಿಸುವ ಕಾಮಗಾರಿಗೆ ₹54,627/- ವ್ಯಯಿಸಲಾಗಿದೆಯೆಂದು ದಾಖಲೆಗಳಲ್ಲಿ ಕಂಡು ಬಂದಿದೆ;

7) The Karnataka Municipalities Accounting and Budgeting Rules, 2006ರ ನಿಯಮ 4ರನ್ವಯ ಪಟ್ಟಣ ಪಂಚಾಯತ್‌ನ ಖಾತೆಯನ್ನು 3 ವಿಧದ ನಿಧಿಗಳಾಗಿ ವರ್ಗೀಕರಿಸಲಾಗಿದೆ, ಅವೆಂದರೆ – 1) ಸಾಮಾನ್ಯ ನಿಧಿ, 2) ನೀರು ಸರಬರಾಜು ಮತ್ತು ಒಳಚರಂಡಿ ನಿಧಿ ಮತ್ತು 3)ಎಂಟರ್‌ಪ್ರೈಸ್ ನಿಧಿ. 2 ಮತ್ತು 3ನೇ ವರ್ಗದ ನಿಧಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಚಟುವಟಿಕೆಗಳಿಗೆ 1ನೇ ವರ್ಗದ ನಿಧಿಯಿಂದ ಹಣವನ್ನು ಬಳಕೆ ಮಾಡುವಂತಿಲ್ಲ ಮತ್ತು ಎಲ್ಲಾ ನಿಧಿಗಳಿಂದ ಖರ್ಚು ಮಾಡಿದ ಹಣಕ್ಕೆ ಸಂಬಂಧಿಸಿದಂತೆ, ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ನಿರ್ವಹಿಸಬೇಕು ಮತ್ತು ವೋಚರ್‌ಗಳನ್ನು ಇಟ್ಟುಕೊಳ್ಳಬೇಕಿದೆ. ಸದರಿ ಮೇಲೆ ಹೇಳಿದ ಬಾವಿ ಸ್ವಚ್ಛಗೊಳಿಸುವ ಕಾಮಗಾರಿಗೆ ₹54,627/- ಹಣವನ್ನು ಪುರಸಭೆಯ ಸಾಮಾನ್ಯ ನಿಧಿಯಿಂದ ವ್ಯಯಿಸುವ ಅಗತ್ಯ \ ಅವಶ್ಯಕತೆ ಏನಿತ್ತೆಂಬ ಯಾವುದೇ ವಿವರಗಳು ಕಛೇರಿ ಟಿಪ್ಪಣಿಯಲ್ಲಿ ದಾಖಲಾಗಿಲ್ಲ. ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಪಟ್ಟಣ ಪಂಚಾಯತ್‌ನ ಕಿರಿಯ ಅಭಿಯಂತರರು ಸಹಿ ಮಾಡಿಲ್ಲ. ಪಟ್ಟಣ ಪಂಚಾಯತ್‌ನ ಸಾಮಾನ್ಯ ನಿಧಿಯಿಂದ ಹಣವನ್ನು ಬಳಕೆ ಮಾಡುವ ಪೂರ್ವದಲ್ಲಿ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದಿಲ್ಲ;

8) ಸದರಿ ಕಾಮಗಾರಿಯನ್ನು ನಿರ್ವಹಿಸಲು ಮತ್ತು ಗುತ್ತಿಗೆದಾರರಿಗೆ ಕಾಮಗಾರಿ ಆದೇಶ ನೀಡಲು ಹಾಗೂ ಕಾಮಗಾರಿಯ ಬಾಬ್ತು ಬಿಲ್ಲನ್ನು ಗುತ್ತಿಗೆದಾರರಿಗೆ ನೀಡಲು ಕಛೇರಿ ಟಿಪ್ಪಣಿಯಲ್ಲಿ 2ನೇ ಎದುರುದಾರರು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಅದರನ್ವಯ ದಿ:22/06/17ರಂದು ಗುತ್ತಿಗೆದಾರರಾದ ಶ್ರೀ.ಬಿ.ಎಫ್.ತುಳಿ ರವರಿಗೆ 1ನೇ ಎದುರುದಾರರು ಕಾರ್ಯಾದೇಶವನ್ನು ನೀಡಿದ್ದಾರೆ. ಸದರಿ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಸದರಿ ಕಾರ್ಯಾದೇಶದಲ್ಲಿ ವಹಿಸುವ ಮೊದಲು ಗುತ್ತಿಗೆದಾರರೊಂದಿಗೆ ಮಾಡಿಕೊಂಡ ಕರಾರು ಲಭ್ಯವಿಲ್ಲ. ಸದರಿ ಗುತ್ತಿಗೆದಾರರ ಬಿಲ್ ಜೊತೆ The Karnataka Municipalities Accounting and Budgeting Rules, 2006ರ ನಿಯಮ 76(2)ರಲ್ಲಿ ಹೇಳಿದಂತೆ ಪಟ್ಟಣ ಪಂಚಾಯತ್‌ನ ಅಭಿಯಂತರರು ದಾಖಲಿಸಿದ ಅಳತೆ ವಹಿ ಇಲ್ಲ. ಅಳತೆ ವಹಿಯ ಸಂಖ್ಯೆ ಮತ್ತು ಪುಟ ಸಂಖ್ಯೆಯನ್ನು ಬಿಲ್ಲಿನಲ್ಲಿ ನಮೂದಿಸಿದ್ದು, ಸದರಿ ಬಿಲ್ಲಿಗೆ ಪುರಸಭೆಯ ಅಭಿಯಂತರರು ಸಹಿ ಮಾಡಿಲ್ಲ. ಸದರಿ ಕಾಮಗಾರಿಯ ಬಾಬ್ತು ಗುತ್ತಿಗೆದಾರರಿಗೆ ₹54,627/-ಗಳನ್ನು ಪಾವತಿಸುವ ಮೊದಲು ನಿಯಮ 76(3)ರಲ್ಲಿ ಹೇಳಿದಂತೆ ಗುತ್ತಿಗೆ ಕರಾರು, ಅಂದಾಜು ಪಟ್ಟಿ ಮತ್ತು ಅಳತೆ ವಹಿಗೆ ಅನುಗುಣವಾಗಿ Register of Public Works ನಲ್ಲಿ ದಾಖಲಿಸಿದ ಬಗ್ಗೆ ದಾಖಲಾತಿಗಳಿಲ್ಲ;

BGM/3105/17



9) The Karnataka Municipalities Accounting and Budgeting Rules, 2006ರ ನಿಯಮ 44(3) ರನ್ವಯ "Account Payee" ಚೆಕ್ ಅನ್ನೇ ಸಂಬಂಧಪಟ್ಟವರಿಗೆ ನೀಡಬೇಕು ಮತ್ತು ನಿಯಮ 45ರನ್ವಯ ಸದರಿ ಪಾವತಿಗೆ ಸಂಬಂಧಿಸಿದಂತೆ, ಸ್ವೀಕೃತಿದಾರರಿಂದ ರಸೀದಿಯನ್ನು ಪಡೆದುಕೊಳ್ಳಬೇಕಿರುವುದು ಕಡ್ಡಾಯವಾಗಿದೆ. ಸದರಿ ದೂರಿನಲ್ಲಿ ಗುತ್ತಿಗೆದಾರರಿಗೆ "Account Payee" ಚೆಕ್ ನೀಡಲಾಗಿದೆಯೆಂದು ಹೇಳಿದ ಬಗ್ಗೆ ದಾಖಲೆಗಳಿಲ್ಲ ಮತ್ತು ಸದರಿಯವರಿಗೆ ಹಣ ಸಂದಾಯವಾದ ಬಗ್ಗೆ ರಸೀದಿ ಇಲ್ಲ. ಕಾರಣ, ಗುತ್ತಿಗೆದಾರರಿಗೆ ಮಾಡಿದ ಸದರಿ ಪಾವತಿ ಕಾನೂನುಬಾಹಿರವಾಗಿದೆ. ಸದರಿ ಲೋಪಕ್ಕೆ ಎದುರುದಾರರುಗಳು ಜವಾಬ್ದಾರರಾಗಿದ್ದು, ಸದರಿಯವರುಗಳ ದುರ್ನಡತೆ ಮೇಲ್ನೋಟಕ್ಕೆ ಸಾಬೀತಾಗಿದೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. ಮೇಲೆ ಹೇಳಿದ 3 ಹಣ ಪಾವತಿಗಳು ನಿಯಮಬಾಹಿರವೆಂದು ಕಂಡು ಬರುತ್ತಿದ್ದು, ಅವುಗಳ ಪೈಕಿ ಕಲ್ಮಠ ಬಾವಿ ಸ್ವಚ್ಛಗೊಳಿಸಿದ ಬಾಬ್ತು ₹54,627/-ಗಳನ್ನು ಶಿರಹಟ್ಟಿ ಪುರಸಭೆಯ ಹಿಂದಿನ ಅಧ್ಯಕ್ಷರಾಗಿದ್ದ 2ನೇ ಎದುರುದಾರರಿಂದ ವಸೂಲಿ ಮಾಡಲು ಕ್ರಮ ವಹಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

11. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ಮತ್ತು 2ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಅದಲ್ಲದೆ, 1ನೇ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ,

ಹಾಗೂ 1ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

13. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Ananda
29/5

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**